ಮೊದಲು ರಸ್ತೆಗಳ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ನಮ್ಮ ದೇಶದಲ್ಲಿ ರಸ್ತೆಗಳು ಆರ್ಥಿಕ ಬೆಳವಣಿಗೆಗೆ, ಸಾಮಾಜಿಕ ಬೆಳವಣಿಗೆಗೆ, ದೇಶದಲ್ಲಿನ ರಕ್ತನಾಳಗಳು ಇದ್ದ ಹಾಗೆ. ಈ ರಸ್ತೆಗಳು ಬೆಳವಣಿ ಆಗದೇ ಹೋದ ಪಕ್ಷದಲ್ಲಿ ಆರ್ಥಿಕ ಬೆಳವಣಿಗೆ ಥಟ್ಟನೆ ನಿಂತುಹೋಗುತ್ತದೆ; ಇಲ್ಲವೇ ಅವ್ಯವಸ್ಥಿತ ವಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಏನಾಗಿದೆಯೆಂದರೆ ಇದರ ಪ್ರಾಮುಖ್ಯತೆಯನ್ನು ಆಡಳಿತಗಾರರು ಸಾಕಷ್ಟು ಪ್ರಮಾಣದಲ್ಲಿ ಅರಿತಂ ಆದಕ್ಕೆ ತಕ್ಕ ಬೆಲೆ ಕೊಟ್ಟಿಲ್ಲ ಎಂದು ಅಂಕಿಅಂಶಗಳಿಂದ ಸ್ಪಷ್ಟವಾಗಿದೆ. ರಕ್ತನಾಳಗಳು ಸರಿಯಾದ ರೀತಿಯಲ್ಲಿ ನಡೆಯುತ್ತಾ ಇದ್ದರೆ ಶರೀರ ಗಟ್ಟಿಯಾಗುತ್ತದೆ. ಹಾಗೆ ರಾಷ್ಟ್ರದ ಆರ್ಥಿಕ ಬೆಳವಣಿಗೆಯಾಗಬೇಕಾದರೆ ಹಳ್ಳಿಯಿಂದ ಡಿಲ್ಲಿವರೆಗೆ ಸುಗಮವಾಗಿ ಹೋಗತಕ್ಕ ರಸ್ತೆಗಳು—ಅವು ವಿಮಾನ ದಾರಿಯಾಗಲೀ, ರೈಲ್ವೆ ದಾರಿಯಾಗಲಿ, ರಸ್ತೆಯಾಗಲೀ ಇವಿಷ್ಟನ್ನೂ ಕೂಡ ಇನ್‌ಫ್ರಾಸ್ಟ್ರಕ್ಚರ್ ಎಕನಾಮಿಕ್ ಡೆವಲಪ್‌ಮೆಂಟ್ ಇದು ತಳಹದಿ. ಈ ತಳಹದಿಯನ್ನು ಬಿಟ್ಟು ಮೇಲೆ ನಾವು ವ್ಯವಸ್ಥೆ ಮಾಡಿಕೊಂಡು ಎಕನಾಮಿಕ್ ಡೆವಲಪ್‌ಮೆಂಟ್ ಮಾಡುತ್ತೇವೆ ಎಂದು ಹೊರಟರೆ ಅದು ಸ್ವಲ್ಪ ದೂರ ಹೋಗುತ್ತದೆ, ಆಮೇಲೆ ಕುಂಠಿತವಾಗುತ್ತದೆ. ಆ ರಸ್ತೆಗಳ ಬೆಳವಣಿಗೆ ಏಕಕಾಲದಲ್ಲಿ ಆಗುವುದಿಲ್ಲ. ಇದು ಒಂದು ಪ್ಲಾನ್ಡ್ ಪ್ರೋಗ್ರಾಂ ಪ್ರಕಾರವಾಗಿ ಭದ್ರವಾದ ತಳಹದಿಯ ಮೇಲೆ ಹೋಗಬೇಕು. ದಿನ ಕ್ರಮೇಣದಲ್ಲಿ ಆರ್ಥಿಕ ಚಟುವಟಿಕೆಗಳು ದೇಶದಲ್ಲಿ ಹೆಚ್ಚಾದಂತೆಲ್ಲಾ ಸಾಮಾನುಸರಂಜಾಮುಗಳ ಓಡಾಟ ಹೆಚ್ಚಾಗುತ್ತದೆ. ಅನೇಕರು ತಿಳಿದಿದ್ದಾರೆ, ಬಸ್‌ಗಳು, ಲಾರಿಗಳು ಹೆಚ್ಚು ಓಡಾಟ ಮಾಡಿದರೆ ಇದರಿಂದ ರಸ್ತೆಗಳು ಕೆಡುತ್ತವೆ ಎಂದು. ಇದಂ ತಪ್ಪು ಅಭಿಪ್ರಾಯ. ಕುರಿಗಳು ಹೋಗುವುದರಿಂದ ರಸ್ತೆಗಳು ಹೆಚ್ಚಾಗಿ ಕೆಡುತ್ತವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮಲ್ಲಿ ಕತ್ತೆ ಮೇಲೆ ಹೇರಿ ಹೊತ್ತು ಹೋಗತಕ್ಕದ್ದು ಇದೆ. ಹಳ್ಳಿಯವರ ಬಗ್ಗೆ ಮೊದಲಂ ಮಾತನಾಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಕೈಯರ್ ಇಂಚಿಗೆ ಎಷ್ಟು ತೂಕ ಬೀಳುತ್ತದೆ ಎನ್ನುವುದು ಮುಖ್ಯ. ಳ ಸ್ಕ್ವೆಯರ್ ಇಂಚಿನ ಮೇಲೆ ಕುರಿಯ ಳ ಕಾಲಿನಿಂದ ತೂಕ ಎಷ್ಟು ಬೀಳುತ್ತದೆ ಎನ್ನುವುದು ಮುಖ್ಯ

ಶ್ರೀ ಎಸ್. ಬಂಗಾರಪ್ಪ.—ಕುರಿಗಳು ಜಾಸ್ತಿಯಾಗಿರುವುದರಿಂದ ರೋಡ್ಸ್ ಕೆಡುತ್ತವೆ ಎನ್ನುವುದು ತಮ್ಮ ಅಭಿಪ್ರಾಯವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎತ್ತಿನಗಾಡಿಗಳು, ಮೋಟಾರು, ಲಾರಿಗಳಿಗಿಂತ ಹೆಚ್ಚಾಗಿ ಧಕ್ಕೆ ಆಗುತ್ತದೆ.

WELCOME TO MANGOLIAN PARLIAMENTARY DELEGATION

MADAM SPEAKER.—Hon'ble Members, I have to make an announcement regarding the arrival of the Mangolian Parliamentary delegation to Bangalore.

On my own behalf and on behalf of the Hon'ble Members of this House, I have great pleasure in welcoming the delegation.

The delegation arrived to-day and will be in Bangalore for a day. This is too short a stay, but we will try to show them as much as possible of our City within the short period. They are now in Officers Gallery. We wish them a happy and fruitful stay. Through them we convey our greetings and best wishes to their Parliament and the people of Mangolia.

SRI D. DEVARAJ URS.—Madam Speaker, on behalf of the Treasury Benches and the Government and on behalf of the Members of this August House, I would like join my voice in welcoming the Parliamentary Delegation which has come here. I wish them a happy sojourn and good time in Karnataka.

SRI H. D. DEVE GOWDA.—I as Leader of the Opposition also join hands on behalf of the Opposition in welcoming the Parliamentary Delegation. They have a short period at their disposal to see many things. Within that short period, the Hon. Speaker will make arrangements to take them round to some of the importance places in Bangalore. I once again extend my heart-felt thanks.

BUDGET ESTIMATES FOR 1975-76 DEMANDS FOR GRANTS

Demand Nos. 18, 19, 27, 53, 54 and 60 (Debate Contd.)

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದುದರಿಂದ ಅವುಗಳ ಜೊತೆಗೆ ಈ ಬಾಡಿಗಳಿಂದಲೂ ರಸ್ತೆಗಳಿಗೆ ಧಕ್ಕೆಯಾಗುತ್ತೆದೆ ಈಗ ಮಾನ್ಯ ಸದಸ್ಯರು ಹೇಳಿದರು ಏನೆಂದರೆ ನಮ್ಮ ರಾಜ್ಯದಲ್ಲಿ ರಸ್ತೆಗಳ ಕೆಲಸ ಸಾಕಷ್ಟು ಪ್ರಮಾಣದಲ್ಲಿ ಬೆಳವಣಿಗೆಯಾಗುತ್ತಾ ಇಲ್ಲ, ಇರತಕ್ಕ ರಸ್ತೆಗಳು ಕೂಡ ಹೆಚ್ಚಾಗಿ ಕೆಟ್ಟು ಹೋಗುತ್ತಿವೆ ಮತ್ತು ವರ್ಷೇ ವರ್ಷೇ ರಸ್ತೆಗಳು ಆಗಬೇಕಾದ ಪ್ರಮಾಣದಲ್ಲಿ ಆಗುತ್ತಾ ಇಲ್ಲ. ರೂರಲ್ ಕಮ್ಯೂನಿಕೇಷನ್ ಪ್ರಾರಂಭ ಮಾಡಿದಿರಿ, ಪೂಜೆ ಮಾಡಿದಿರಿ ಮುಂದಕ್ಕೆ ಬರಲಿಲ್ಲ ಎಂದೂ ಹೇಳಿದರು. ಕೆಲಸಕಾರ್ಯಗಳು ನಡೆಯುತ್ತಾ ಇದ್ದರೆ ನಮ್ಮ ಆಶೆ ಆಕಾಂಕ್ಷೆಗಳು ಹೆಚ್ಚಾಗುತ್ತವೆ ಅದನ್ನೂ ಗಮನದಲ್ಲಿ ಇಟ್ಟುಕೊಳ್ಳಬೇಕು.

ನಮ್ಮ ಆಶೆ ಆಕಾಂಕ್ಷೆಗಳು ಹೆಚ್ಚಾದ ಪ್ರಮಾಣದಲ್ಲಿ ಅದೇ ಪ್ರಮಾಣದಲ್ಲಿ ನಮ್ಮ ಹಣಕಾಸಿನ ಬೆಳವಣಿಗೆಯೂ ಆಗಲೇಬೇಕಾಗುತ್ತದೆ ಇಲ್ಲದೇ ಹೋದರೆ ನಿರೀಕ್ಷಿಸಿದಂಥ ಫಲ ದೊರಕುವುದು ಕಷ್ಟವಾಗುತ್ತದೆ. ಈಗ ಒಂದು ಕಡೆ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು ಅದು ಏನೆಂದರೆ ನಾವು ಪೊಡಕ್ಟಿವ್ ಅಸೆಟ್ಸ್‌ಗೆ ಪ್ರಾಧಾನ್ಯತೆ ಕೊಡಬೇಕು ಎಂದು ಅದನ್ನು ನಾವು ಕೊಡದೇ ಇರುವುದರಿಂದ ರಾಷ್ಟ್ರದಲ್ಲಿ ಆರ್ಥಿಕ ಸಂಪತ್ತು ಬೆಳೆಯದೇ ನಾವು ಇಂದು ಇಷ್ಟು ಕಷ್ಟಕಾರ್ಪಣ್ಯಗಳಿಗೆ ಬಂದು ಸಿಕ್ಕಿದ್ದೇವೆ ಎನ್ನತಕ್ಕಂಥದ್ದು ವಾಸ್ತವವಾದದ್ದು ಇರಿಗೇಷನ್, ಪವರ್‌ಗೆ ಹೆಚ್ಚಿನ ಹಣವನ್ನು ಒದಗಿಸಬೇಕು ಎನ್ನತಕ್ಕಂಥದ್ದನ್ನು ನಾನು ಒಪ್ಪುತ್ತೇನೆ. ಹೆಚ್ಚು ಹಣವನ್ನು ಒದಗಿಸಬೇಕೆಂದರೆ ಆರ್ಥಿಕ ಪರಿಸ್ಥಿತಿ ಜೆನ್ನಾಗಿಲ್ಲ. ಹೋದ ವರ್ಷ ಮತ್ತು ಈಚೆ ವರ್ಷ ಸ್ವಲ್ಪ ಮಟ್ಟಿಗೆ ಈ ರಸ್ತೆ ಕಾಮಗಾರಿಗಳು, ಸೇತುವೆ ಕಾಮಗಾರಿಗಳಿಗೆ ಹಣವನ್ನು ಒದಗಿಸಿರತಕ್ಕಂಥದ್ದು ಕಡಿಮೆ ಎನ್ನತಕ್ಕಂಥದ್ದು ಅಂಕಿಅಂಶಗಳಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣವೇನು ? ಮೇಜರ್ ಇರಿಗೇಷನ್‌ಗೆ, ಮೈನರ್ ಇರಿಗೇಷನ್ನಿಗೆ, ಪವರ್ ಡೆವಲಪ್‌ಮೆಂಟ್‌ಗೆ ಹಣವನ್ನು ಒದಗಿಸಬೇಕಾದಂಥ ಕಾಲದಲ್ಲಿ ಇದಕ್ಕೆ ಸ್ವಲ್ಪಮಟ್ಟಿಗೆ ಧಕ್ಕೆಯಾಗಿದೆ ಎನ್ನತಕ್ಕಂಥದು ಸ್ಪಷ್ಟ. ಇದರಿಂದಾಗಿ ರಸ್ತೆಗಳನ್ನು ಎಷ್ಟರಮಟ್ಟಿಗೆ ಉತ್ತಮ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿತ್ತೋ ಅಷ್ಟು ಪ್ರಮಾಣದಲ್ಲಿ ಇಟ್ಟುಕೊಳ್ಳುವುದಕ್ಕೆ ಕಷ್ಟವಾಗಿದೆ. ರೂರಲ್ ಕಮ್ಯೂನಿಕೇಷನ್ ಮಾಡಬೇಕೆಂದು ನೀವು ನಾವೆಲ್ಲರೂ ಎಷ್ಟು ಆತುರವಾಗಿ ಮಾಡಲು ಹೊರಟಿದ್ದೋ ಆ ಕೆಲಸವು ಸ್ವಲ್ಪ ಕುಂಠಿತವಾಗಿದೆ ಆ ಕೆಲಸ ಏತಕ್ಕೋಸ್ಕರ ಕುಂಠಿತವಾಯಿತು ಎಂಬುವಂಥ ವಿಷಯವನ್ನು ಅರಿತಾಗ ಬಹುಶಃ ನಾನು ಹೇಳತಕ್ಕಂಥ ಮಾತು ಸರಿ ಎನ್ನತಕ್ಕಂಥದ್ದನ್ನು ತಾವು ಒಪ್ಪಲೇಬೇಕಾಗುತ್ತದೆ. ಈಗ ಅಂಕಿ ಅಂಶಗಳನ್ನು ತಮಗೆ ಹೇಳುವುದಾದರೆ ೧೯೭೧-೭೨ರಲ್ಲಿ ೬೩.೦ ಲಕ್ಷ ಖರ್ಚಾಗಿದೆ, ೧೯೭೨-೭೩ರಲ್ಲಿ ೮೦.೬೬ಕ್ಕೆ ಇಳಿದಿದೆ, ೧೯೭೩-೭೪ರಲ್ಲಿ ೫೬.೫೩ಕ್ಕೆ ಇಳಿದಿದೆ ಮತ್ತು ಈ ಒಂದು ವರ್ಷ ಡಿಸೆಂಬರ್ ಕೊನೆಯವೇಳೆಗೆ ೩೨ಕ್ಕೆ ಇಳಿಯಿತು.

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೇ ಮುಚ್ಚಿ ಬೇಕೆಂದು ಹೇಳಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಏತಕ್ಕೆ ಮುಚ್ಚಿ ಬೇಕೆಂದು ಹೇಳುತ್ತೀರಿ ಎನ್ನುವ ಉದ್ದೇಶ ಗೊತ್ತಿದೆ. I don't think the Hon. The Leader of the Opposition meant that it should be closed.

ಶ್ರೀ ಕೊಣಂದೂರು ಲಿಂಗಪ್ಪ.—ಅವರಿಗೆ ಸಂಬಳ ಕೊಡುವುದಕ್ಕೆ ಆಗದಿದ್ದ ಮೇಲೆ ಏತಕ್ಕೆ ಇನ್ನೂ ಇಟ್ಟುಕೊಂಡಿದ್ದೀರಿ ?

SRI H. D. DEVE GOWDA.— More than 50 per cent will go to establishment.

SRI H. M. CHANNABASAPPA.—I appreciate the spirit behind your statement. I am sure as a responsible Leader of the Opposition, he